**ಪೊಲೀಸ್ ಆಯುಕ್ತರ ಕಛೇರಿ, ಎ.ಬಿ ಶೆಟ್ಟಿ ವೃತ್ತದ ಬಳಿ, ಮಂಗಳೂರು ನಗರ, ಮಂಗಳೂರು-1.**

**ದೂ. ಸಂ: 0824-2220803, ಈ-ಮೇಲ್ : magmgc@ksp.gov.in.**

## ಪೊಲೀಸು ಆಯುಕ್ತರು, ಮಂಗಳೂರು ನಗರ, ಮಂಗಳೂರು ರವರ ನಡವಳಿಗಳು

ವಿಷಯ: ಸಾರ್ವತ್ರಿಕ ರಾಜ್ಯ ವಿಧಾನಸಭಾ ಚುನಾವಣೆ 2023 ರ ನಿಮಿತ್ತ ಮಂಗಳೂರು ನಗರ ಪೊಲೀಸು ಕಮೀಷನರೇಟ್ ವ್ಯಾಪ್ತಿಯಲ್ಲಿ ಪರವಾನಿಗೆ ಹೊಂದಿರುವ ಆಯುಧಗಳನ್ನು ಒಯ್ಯುವುದನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ: ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ:464/ INST/ 2022/EPS ದಿನಾಂಕ: 01-09-2009.

*****

**ಪ್ರಸ್ತಾವನೆ :**

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಸಾರ್ವತ್ರಿಕ ಚುನಾವಣೆಗಳು / ಉಪಚುನಾವಣೆಗಳ ಸಮಯದಲ್ಲಿ ಶಾಂತಿಯುತ, ಮುಕ್ತ ಮತ್ತು ನ್ಯಾಯಸಮ್ಮತವಾದ ಮತದಾನವನ್ನು ನಡೆಸಲು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪರವಾನಿಗೆ ಹೊಂದಿರುವ ಆಯುಧಗಳನ್ನು ಒಯ್ಯುವುದನ್ನು ನಿಷೇಧಿಸುವಂತೆ ಉಲ್ಲೇಖಿತ ಪತ್ರದಲ್ಲಿ ನಿರ್ದೇಶಿಸಿರುತ್ತಾರೆ.

ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಸಾರ್ವತ್ರಿಕ ರಾಜ್ಯ ವಿಧಾನಸಭಾ ಚುನಾವಣೆ 2023 ನ್ನು ಚುನಾವಣೆಯ ಅವಧಿಯಲ್ಲಿ ಶಾಂತಿಯುತ, ಮುಕ್ತ ಮತ್ತು ನ್ಯಾಯಸಮ್ಮತವಾದ ಮತದಾನವನ್ನು ನಡೆಸಲು ಹಾಗೂ ಸಾರ್ವಜನಿಕ ಶಾಂತಿ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡುವ ದೃಷ್ಟಿಯಿಂದ ದಿನಾಂಕ: 29-03-2023 ರಿಂದ ದಿನಾಂಕ: 21-05-2023ರ ವರೆಗೆ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಆಯುಧ ಒಯ್ಯುವುದನ್ನು ಸಂಪೂರ್ಣ ನಿಷೇಧಿಸುವುದು ಅಗತ್ಯವೆಂದು ತಿರ್ಮಾನಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: 04/ಎಂಎಜಿ-01 /ಎಂಜಿಸಿ/2023, ದಿನಾಂಕ: 29-03-2023.**

ಕುಲದೀಪ್ ಕುಮಾರ್ ಆರ್. ಜೈನ್, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಹಾಗೂ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ, ಮಂಗಳೂರು ನಗರ ಆದ ನಾನು ಕಲಂ: 144 ಸಿ.ಆರ್.ಪಿ.ಸಿ ಕಾಯ್ದೆಯನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ದಿನಾಂಕ: 29-03-2023 ರಿಂದ ದಿನಾಂಕ: 21-05-2023 ರವರೆಗೆ ಪರವಾನಿಗೆ ಹೊಂದಿರುವ ಆಯುಧಗಳನ್ನು ಒಯ್ಯುವುದನ್ನು ಸಂಪೂರ್ಣವಾಗಿ ನಿಷೇಧಿಸಿ ನಿಷೇಧಾಜ್ಞೆಯನ್ನು ಈ ಮೂಲಕ ಘೋಷಿಸಿರುತ್ತೇನೆ.

COMMISSIONER OF POLICE & ADDL. DISTRICT MAGISTRATE MANGALURU CITY, MANGALURU

ಈ ನಿಷೇಧಾಜ್ಞೆಯನ್ನು ದಿನಾಂಕ: 29-03-2023 ರಂದು ನನ್ನ ಸ್ವ ಹಸ್ತ ಸಹಿ ಹಾಗೂ ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

COMMISSIONER OF POLICE & ADDL. DISTRICT MAGISTRATE MANGALURU CITY, MANGALURU

29/3/23

**(ಕುಲದೀಪ್ ಕುಮಾರ್ ಆರ್. ಜೈನ್, ಐ.ಪಿ.ಎಸ್)**
ಪೊಲೀಸ್ ಆಯುಕ್ತರು ಹಾಗೂ
ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ,
ಮಂಗಳೂರು ನಗರ, ಮಂಗಳೂರು.

**ಇವರಿಗೆ:**

1 ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರಿಗೆ ಮಾಹಿತಿಗಾಗಿ.

2 ಉಪ ಪೊಲೀಸು ಆಯುಕ್ತರು, (ಕಾ ಮತ್ತು ಸು), ಮಂಗಳೂರು ನಗರ.

3 ಉಪ ಪೊಲೀಸು ಆಯುಕ್ತರು, (ಅಪರಾಧ ಮತ್ತು ಸಂಚಾರ), ಮಂಗಳೂರು ನಗರ.

4 ಸಹಾಯಕ ಪೊಲೀಸು ಆಯುಕ್ತರು, ಮಂಗಳೂರು ಕೇಂದ್ರ, ದಕ್ಷಿಣ ಮತ್ತು ಉತ್ತರ ಉಪ ವಿಭಾಗ ಇವರಿಗೆ- ಸೂಕ್ತಕ್ರಮಕ್ಕಾಗಿ.

5 ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ, ದ.ಕ ಜಿಲ್ಲೆ ಮಂಗಳೂರು ಇವರಿಗೆ ಈ ಅಧಿಸೂಚನೆಯನ್ನು ಜಿಲ್ಲೆಯ ವಾರ್ತಾ ಮಾಧ್ಯಮಗಳಲ್ಲಿ ವಾರ್ತಾ ರೂಪದಲ್ಲಿ ಉಚಿತವಾಗಿ ಪ್ರಚಾರ ಪಡಿಸಲು ಕೋರಿದೆ.

6 ಈ ಕಛೇರಿಯ ಗಣಕಯಂತ್ರ ಶಾಖೆಗೆ ಪೊಲೀಸ್ ಬ್ಲಾಗ್‌ನಲ್ಲಿ ಅಳವಡಿಸಲು.

7 ಈ ಕಛೇರಿಯ ಸಿ.ಬಿ ಶಾಖೆ ಮತ್ತು ಸಿ.ಎಸ್.ಬಿ ಶಾಖೆಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.

8 ನಗರದ ಎಲ್ಲಾ ಪೊಲೀಸು ಠಾಣಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ.

9 ಪೊಲೀಸ್ ನಿರೀಕ್ಷಕರು, ನಗರ ನಿಯಂತ್ರಣ ಕೊಠಡಿ ರವರಿಗೆ ಸೂಕ್ತ ಕ್ರಮಕ್ಕಾಗಿ.